C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ.115/2021

ದಿನಾಂಕಃ 16.11.2022 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ:4 ಪಿ. ಡಬ್ಲ್ಯೂ:4

| | |
|---|---|
| ಸಾಕ್ಷಿದಾರರ ಹೆಸರು | ಶರತ್ |
| ತಂದೆಯ ಹೆಸರು | ಉಮೇಶ್ ಕೆ.ಬಿ |
| ವಯಸ್ಸು | 27 ವರ್ಷ |
| ಉದ್ಯೋಗ | ಗಾರೆ ಕೆಲಸ |
| ವಾಸ | ಕೃಷ್ಣಾ ಪುರ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನನಗೆ ತೋರಿಸಿದ ನಿಪಿ.3 ಮಹಜರ್ ನಲ್ಲಿ ನನ್ನ ರುಜು ಇರುತ್ತದೆ. ಸಾಕ್ಷಿಯ ರುಜುವನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು. ಕೃಷ್ಣಾ ಪುರ ದಲ್ಲಿ ನಾನು ಹೊಸದಾಗಿ ಕಟ್ಟಿಸುತ್ತಿದ್ದ ಮನೆಯ ಪಕ್ಕದಲ್ಲಿ ಇದ್ದ ಚಾಸಾ.1 ರವರ ಮನೆಯ ಹತ್ತಿರ ಮಾಡಿರುತ್ತೇನೆ. ಸದರಿ ಸಹಿಯನ್ನು ಮಾಡಿ 2 ರಿಂದ ಎರಡುವರೆ ವರ್ಷ ಆಗಿರಬಹುದು, ಸದರಿ ರುಜುವನ್ನು 2020 ನೇ ಇಸವಿಯಲ್ಲಿ ಮಾಡಿರಬಹುದು. ಪೊಲೀಸನವರು ಬಂದಿದ್ದವರು, ಗಲಾಟೆಯಾಗಿದೆ ಮಹಜರ್ ಮಾಡುತ್ತಿದ್ದೇವೆ ಎಂದು ತಿಳಿಸಿದರು. ಸತೀಶ್ ಮತ್ತು ದಿಲೀಪ್ ಅವರ ನಡುವೆ ಗಲಾಟೆ ನಡೆದಿದೆ ಅಂತ ಪೊಲೀಸರು ಮಹಜರ್ ಮಾಡುತ್ತಿದ್ದರು. ನಾನು ನಿಪಿ.3 ಮಹಜರ್ ಗೆ ಸಹಿ ಮಾಡಿದ ಒಂದು ದಿನದ ಹಿಂದೆ ಗಲಾಟೆ ನಡೆದಿತ್ತು. ಪೊಲೀಸರು ಬೆಳಗ್ಗೆ ಸುಮಾರು 11.00 ರಿಂದ 11.30 ಗಂಟೆಗೆ ಬಂದರು, ನಾನು 1.00 ರಿಂದ 1.30 ಗಂಟೆ ಯಲ್ಲಿ ಮಹಜರ್ ಗೆ ಸಹಿ ಮಾಡಿದೆ. ಮಹಜರ್ ಗೆ ಚಾಸಾ.5 ಮಧು ಸಹಾ ಸಹಿ ಮಾಡಿದ್ದರು. ಹಿಂದಿನ ದಿವಸ ರಾತ್ರಿ 10.30 ರಿಂದ 11.00 ಗಂಟೆಯಲ್ಲಿ ಗಲಾಟೆಯಾಗಿತ್ತು ಅಂತ ನನಗೆ ಗೊತ್ತಾಯಿತು. ಪೊಲೀಸರು ಸ್ಥಳದಲ್ಲಿ ಬಿದ್ದಿದ್ದ ರಕ್ತಸಿಕ್ತ ಮಣ್ಣು ಮತ್ತು ಸಾದಾ ಮಣ್ಣನ್ನು ತೆಗೆದುಕೊಂಡರು . ಸತೀಶ್ ರವರ 2 ಬಟ್ಟೆಗಳನ್ನು ತೆಗೆದುಕೊಂಡರು.

ಅಲೇ ಬಿದ್ದಿದ್ದ ರಕ್ತಸಿಕ್ತವಾಗಿದ್ದ ಒಂದು ಕುಡುಗೋಲನ್ನು ಪೊಲೀಸರು ತೆಗೆದುಕೊಂಡರು. ಊರಿನವರು 3-4 ಜನರು ಸ್ಥಳದಲ್ಲಿ ಇದ್ದರು. ಸತೀಶ್ ಅವರ ಬಟ್ಟೆಗಳಾದ ಒಂದು ಟೀ ಶರ್ಟ್ ಮತ್ತು ಒಂದು ಬರ್ಮೋಡಾ ಚಡ್ಡಿಯನ್ನು ಚಾಸಾ.1 ರವರು ಪೊಲೀಸರಿಗೆ ಕೊಟ್ಟರು. ಪೊಲೀಸರು ವಶಪಡಿಸಿಕೊಂಡಿದ್ದ ಮೇಲೆ ಹೇಳಿದ ವಸ್ತುಗಳನ್ನು ಈಗ ನೋಡಿದರೆ ಗುರುತಿಸುತ್ತೇನೆ. ಮು.ಮಾ.1 ಟೀ ಶರ್ಟ್, ಮು.ಮಾ.2 ಬರ್ಮೋಡ ಚಡ್ಡಿ, ಮು.ಮಾ.3 ಕಾಯಿ ಕೀಳುವ ಕುಡುಗೋಲು , ಮು.ಮಾ.4 ಸಾದಾ ಮಣ್ಣು ಮತ್ತು ಮು.ಮಾ.5 ರಕ್ತದ ಕಲೆ ಇರುವ ಮಣ್ಣನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಮು.ಮಾ.1 ರಿಂದ 5 ರ ಮೇಲೆ ಅಂಟಿಸಿರುವ ಚೀಟಿಯಲ್ಲಿ ಇರುವ ಅವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.1(ಎ) ರಿಂದ ಮು.ಮಾ.5(ಎ) ಎಂದು ಗುರುತಿಸಲಾಯಿತು. ಪೊಲೀಸರು ಮಹಜರ್ ಬರೆದುಕೊಂಡು ಅದಕ್ಕೆ ನನ್ನ ಸಹಿಯನ್ನು ಮಾಡಿಸಿಕೊಂಡರು. ಪೊಲೀಸರು ಮಹಜರ್ ಕಾಲದ ನಿಪಿ.4 ರಿಂದ ನಿಪಿ.7 ಫೋಟೋಗಳನ್ನು ತೆಗೆದಿದ್ದರು. ನಿಪಿ.4 ರಿಂದ ನಿಪಿ.6 ಫೋಟೋಗಳಲ್ಲಿ ನಾನು, ಮಧು , ಬೋರೆಗೌಡರು ಇದ್ದೇವೆ. ನಿಪಿ.7 ಫೋಟೋದಲ್ಲಿ ಸತೀಶ್ ರವರ ಬಟ್ಟೆ ಕಾಣಿಸುತ್ತಿದೆ.

ಆರೋಪಿ ಕುಡುಗೋಲಿನಿಂದ ಸತೀಶ್ ರವರಿಗೆ ಹೊಡೆದಿದ್ದಾಗ , ಚಾಸಾ.2 ರವರ ಬಲಗೈಗೆ ಮತ್ತು ಹಣೆಯ ಎಡಭಾಗಕ್ಕೆ ಏಟು ಬಿದ್ದಿತ್ತು. ಪೊಲೀಸರು ನನಗೆ ನೀಡಿದ ನೋಟೀಸನ್ನು ಈಗ ನೋಡುತ್ತಿದ್ದು ಅದರಲ್ಲಿ ನನ್ನ ರುಜು ಇರುತ್ತದೆ. ನೋಟೀಸನ್ನು ನಿಪಿ.11 ಎಂದು ಹಾಗೂ ನಿಪಿ.11(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಎನ್. ವಕೀಲರಿಂದಃ</u>

ನನಗೆ ಓದಲು ಬರುತ್ತದೆ. ಪೊಲೀಸ್ ನೋಟೀಸನ್ನು ನನಗೆ ಕೊಟ್ಟಿದ್ದ ದಿನಾಂಕವನ್ನು ನಿಪಿ.11 ರಲ್ಲಿ ನಮೂದು ಮಾಡಿಲ್ಲ. ಸ್ಥಳ ಮಹಜರನ್ನು ಯಾವ ದಿನಾಂಕದಂದು ಮಾಡಿದರು ಅಂತ ನನಗೆ ಗೊತ್ತಿಲ್ಲ. ಸಾಕ್ಷಿಯು ಸ್ವತಃ ನುಡಿಯುತ್ತಾರೆ ಗಲಾಟೆಯಾಗಿದ್ದ ಮಾರನೆಯ ದಿವಸ ಸ್ಥಳ ಮಹಜರನ್ನು ಮಾಡಿದ್ದರು ಎಂದು. ಮಹಜರ್ ಕಾಲಕ್ಕೆ 3-4 ಜನರು ಇದ್ದರು. ಗಲಾಟೆ ನಡೆದಿದ್ದ ಜಾಗವನ್ನು ಪೊಲೀಸರಿಗೆ ಯಾರು ತೋರಿಸಿದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ.3 ಮಹಜರ್ ನಲ್ಲಿ ಬರೆದಿರುವ ಒಕ್ಕಣೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನುಡಿಯುತ್ತಾರೆ ಪೊಲೀಸರು ನನಗೆ ಒಕ್ಕಣೆಯನ್ನು ಹೇಳಿದರು ಎಂದು. ಮಹಜರ್ ಒಕ್ಕಣೆಯನ್ನು ಪೊಲೀಸರು ಓದಿ ಹೇಳಿದರು. ಒಕ್ಕಣೆಯನ್ನು ಓದಿ ಹೇಳಿದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ.

ಸ್ಥಳ ಮಹಜರ್ ಗೆ ಬಂದಿದ್ದ ಪೊಲೀಸರ ಹೆಸರು ಗೊತ್ತಿಲ್ಲ. ಪೊಲೀಸರು ಸಮವಸ್ತ್ರದಲ್ಲಿ ಇದ್ದರು. ಪೊಲೀಸರು ನಿಪಿ.3 ಮಹಜರ್ ಒಕ್ಕಣೆಯನ್ನು ನನಗೆ ಓದಿ ಹೇಳಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರ ಮನೆ, ಚಾಸಾ.2 ರವರ ಮನೆಯಿಂದ 10 ಮೀಟರ್ ದೂರದಲ್ಲಿ ಇದೆ. ಚಾಸಾ.2 ರವರ ಮನೆ ಪಕ್ಕದಲ್ಲೇ ಬೇರೆ ಬೇರೆ ಮನೆಗಳು ಇದೆ ಎಂದರೆ ಸಾಕ್ಷಿಯು ಚಾಸಾ.2 ರವರ ಮನೆಯ ಪಕ್ಕದಲ್ಲಿ ಖಾಲಿ ಸೈಟು ಇದ್ದು ಇದರ ಪಕ್ಕದಲ್ಲಿ ಚಾಸಾ.1 ರವರ ಮನೆ ಇದೆ ಎಂದು ಹೇಳುತ್ತಾರೆ. ನಾನು ಮಹಜರ್ ಸ್ಥಳಕ್ಕೆ ಹೋಗಿರಲಿಲ ಎಂದರೆ ಸರಿಯಲ್ಲ. ಚಾಸಾ.2 ರವರ ಮನೆ ಪಕ್ಕದಲ್ಲಿ ಬೇರೆ ಬೇರೆ ಮನೆಗಳು ಇದೆ ಎಂದರೆ ಸರಿಯಲ್ಲ. ಮಹಜರ್ ಸ್ಥಳದ ಚಕ್ಕುಬಂದಿ ಗೊತ್ತಿಲ್ಲ. ನಾನು ಮಹಜರ್ ಕಾಲದಲ್ಲಿ ಇರಲಿಲ್ಲ ಹಾಗೂ ಪೊಲೀಸರು ನನ್ನ ಸಮಕ್ಷಮದಲ್ಲಿ ಯಾವುದೇ ಮುದ್ದೆ ಮಾಲನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ.3 ಮಹಜರ್ ಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸಹಿ ಮಾಡಿದ ಕಾಲಕ್ಕೆ ನಿಪಿ.3 ಮಹಜರ್ ಅಪರಾಧ ವಿವರ ನಮೂನೆ ಫಾರಂ ಖಾಲಿ ಇತ್ತು ಎಂದರೆ ಸರಿಯಲ್ಲ. ಎಂ.ಒ.3 ತೆಂಗಿನ ಕಾಯಿ ಕೀಳುವ ಕುಡುಗೋಲು ಹಳ್ಳಿ ಕಡೆಗಳಲ್ಲಿ ಸಾಮಾನ್ಯವಾಗಿ ಎಲ್ಲರ ಮನೆಯಲ್ಲಿ ಇರುತ್ತದೆ ಎಂದರೆ ಸರಿ. ಎಂ.ಒ.3 ಕುಡುಗೋಲನ್ನು ತೆಂಗಿನ ಕಾಯಿ ಕೀಳುವುದಕ್ಕೆ ಮಾತ್ರ ಬಳಸುತ್ತಾರೆ ಎಂದರೆ ಸರಿ. ರೈತರು ಕುಡುಗೋಲನ್ನು ಸಾಮಾನ್ಯವಾಗಿ ಹುಲ್ಲು ಕುಯ್ಯುವುದಕ್ಕೆ, ಕಡ್ಡಿಗಳನ್ನು ಕತ್ತರಿಸುವುದಕ್ಕೆ ಬಳಸುತಾರೆ ಎಂದರೆ ಸರಿ .ಪೊಲೀಸರು ಮಹಜರ್ ಕಾಲದಲ್ಲಿ ಕುಡುಗೋಲನ್ನು ನನ್ನ ಮುಂದೆ ವಶಪಡಿಸಿಕೊಂಡಿಲ್ಲ. ಕುಡುಗೋಲು ಬೇರೆ ಮತ್ತು ಜವಳಿ ಕುಡುಗೋಲು ಬೇರೆ ಎಂದರೆ ಸರಿ. ಚಾಸಾ.1 ರವರ ಮನೆಯ ಚಕ್ಕುಬಂದಿ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳನ್ನು ನನ್ನ ಮುಂದೆ ಸೀಜ್ ಮಾಡಿಲ್ಲ ಎಂದರೆ ಸರಿಯಲ್ಲ. ಮಹಜರ್ ಒಕ್ಕಣೆಯನ್ನು ಬರೆದಿದ್ದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಕುಡುಗೋಲು ಸ್ಥಳದಲ್ಲೇ ಬಿದ್ದಿತ್ತು. ಶರ್ಟು ಮತ್ತು ಬರ್ ಮೋಡಾ ಚಡ್ಡಿಯನ್ನು ಚಾಸಾ.1 ತಂದು ಕೊಟ್ಟರು. ಗಲಾಟೆ ವಿಷಯದಲ್ಲಿ ಪೊಲೀಸರು ಬಂದಾಗ ಸಾಮಾನ್ಯವಾಗಿ 50 ರಿಂದ 60 ಜನರು ಸೇರುತ್ತಾರೆ ಎಂದರೆ ಸರಿ. ಆದರೆ ಸಾಕ್ಷಿಯು ಸ್ವತಃ ನುಡಿಯುತ್ತಾರೆ ಸದರಿ ಪ್ರಕರಣದಲ್ಲಿ ಪೊಲೀಸರು ಬಂದಾಗ ಬೆಳಗ್ಗೆ 10.30 ಗಂಟೆ ಆಗಿದ್ದರಿಂದ ಜನರು ದನಗಳನ್ನು ಹೊಡೆದುಕೂಂಡು ಜಮೀನುಗಳಿಗೆ ಹೊರಟು ಹೋಗಿದ್ದರು. ಚಾಸಾ.1 ಮು.ಮಾ.1 ಟೀ ಶರ್ಟ್ ಮತ್ತು ಮು.ಮಾ.2 ಬರ್ ಮೋಡಾ ಚಡ್ಡಿಯನ್ನು ನನ್ನ ಮುಂದೆ ಪೊಲೀಸರಿಗೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ.

ನಿಪಿ.3 ದಾಖಲಾತಿಯಲ್ಲಿ ಕ್ರಮ ಸಂಖ್ಯೆ12 ರಲ್ಲಿ , ಸಮಯವನ್ನು 2.30 ಅಂತ ಇದ್ದುದನ್ನು 1.30 ಅಂತ ತಿದ್ದಿ ಬರೆದಿದ್ದಾರೆ ಎಂದರೆ ಸರಿಯಲ್ಲ. ನಿಪಿ.4 ರಿಂದ 7 ಫೋಟೋಗಳನ್ನು

ಪೊಲೀಸರು ತೆಗೆದರು. ಫೋಟೋಗಳನ್ನು ತೆಗೆದಿದ್ದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಈ ದಿವಸ ನ್ಯಾಯಾಲಯಕ್ಕೆ ಸಾಕ್ಷಿ ಹೇಳುವುದಕ್ಕೆ ನಮಗೆ ಸಮನ್ಸ್ ಬಂದಿದು ನಾನು, ಮಧು, ನಾಗರಾಜು,ನಾರಾಯಣ, ಶಂಕರೇಗೌಡ, ಲೋಕೇಶ್ ಕೆ.ವಿ. ಬಂದಿದ್ದೇವೆ. ನಾನು ಮತ್ತು ಇವರುಗಳು , ನ್ಯಾಯಾಲಯದ ಹೊರಗಡೆ ನ್ಯಾಯಾಲಯದ ಆವರಣದಲ್ಲಿ ಚಾಸಾ.2 ಮತ್ತು ಚಾಸಾ.3 ರವರ ಜೊತೆಯಲ್ಲಿದ್ದು ಮಾತನಾಡುತ್ತಾ ಕುಳಿತಿದ್ದೆವು ಎಂದರೆ ಸರಿ. ನಾನು ಗಲಾಟೆಯನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ನಾನು ಗಲಾಟೆಯನ್ನು ನೋಡಿಲ್ಲದೆ ಇರುವುದರಿಂದ, ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲುಳನ್ನು ನಾನು, ಚಾಸಾ.2 ಪೊಲೀಸರೊಂದಿಗೆ ಕೇಸಿಗೋಸ್ಕರ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಮಹಜರ್ ಕಾಲಕ್ಕೆ ಹಾಜರಿಲದೆ ಇದ್ದರೂ ಸಹಾ ಚಾಸಾ.2 ಮತ್ತು ಚಾಸಾ.3 ರವರ ಚಾಡಿ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಮುಂದೆ ಯಾವುದೇ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.